


ಊಟಕ್ಕೆ ಕುಳಿತರು.

'ಈಗ ನಾವು ಮಾಡ್ತಿದ್ದದ್ದು ವ್ಯರ್ಥ ಆಗೋದಿಲ್ಲ. ಸಮಯ ಹಿಡಿಭೌದು' ಶ್ರೀಪತಿ ತನಗೆ ತಾನೆ ಸಂತೈಸಿಕೊಂಡ. 'ಊಟದ ನಂತ್ರ ನಾನೊಂದು ಪ್ರಯೋಗ ಮಾಡುವವನಿದ್ದೇನೆ.' ಗಜಾನನ ಉತ್ಸಾಹ ತೋರಿದ. ಏನೆಂದು ವಿಚಾರಿಸುವ ಉಮೇದಿ ಯಾರಲ್ಲೂ ಇರಲಿಲ್ಲ. ಎಲ್ಲವುಗಳಿಂದ ಹೊರಗಿದ್ದು ಮಗುವಿನಂತೆ ಉಣ್ಣುತ್ತಿದ್ದ ಗಂಡನನ್ನು ನೋಡಿ ಯಮುನಕ್ಕ ಸಣ್ಣದಾಗಿ ಬಿಕ್ಕಿದಳು.

ಊಟವಾದ ಬಳಿಕ ಗಜಾನನ ಜಗಲಿಯ 'ಸುಲಭ ವಾಚನಾಲಯ'ದ ಕಪಾಟಿನಲ್ಲಿದ್ದ 'ಪರ್ವತೇಶ್ವರ' ಕಾದಂಬರಿಯನ್ನು ಹಿಡಿದು ಜನಾರ್ದನನ ಮಂಚದೆದುರು ಕುಳಿತ. ಯಕ್ಷಗಾನದ ವೇಷ ಮುಖಪುಟದ ಚಿತ್ರವಾಗಿತ್ತು. ಕುಮಟೆಯ ಗಜಾನನ ಪ್ರೆಸ್ಸಿನಲ್ಲಿ ಮುದ್ರಣವಾಗಿ ಅಲ್ಲಿಂದಲೆ ಎರಡು ಸಾವಿರದ ಹತ್ತರಲ್ಲಿ ಪ್ರಕಟವಾಗಿತ್ತು. 'ಜನ್ನುಭಾವ ಎಷ್ಟು ಪುಸ್ತಕ ಬರೆದ?' ಶ್ರೀಪತಿಯನ್ನು ವಿಚಾರಿಸಿದ. ಇತ್ತೀಚಿನವರೆಗೆ ಅವನಿಗೂ ಗೊತ್ತಿರಲಿಲ್ಲ. 'ಅವರು ಬರೆದದ್ದು ಒಂದೇ ಒಂದು ಪುಸ್ತಕ' ಯಮುನಕ್ಕ ಮಾಹಿತಿ ನೀಡಿದಳು. ಜನಾರ್ದನ ಅವಧಾನಿಯ ಅರ್ಥಾತ್ 'ಜಯಶ್ರೀ'ಯವರ ಬರೆವಣಿಗೆ ಒಂದೇ ಕೃತಿಗೆ ಯಾಕೆ ನಿಂತು ಹೋಯಿತು ಇತ್ಯಾದಿ ಅವರಿಬ್ಬರೂ ಚರ್ಚಿಸುತ್ತಿರುವಾಗ ಯಮುನಕ್ಕ, 'ಎಲ್ಲ ಅವರ ಜೀವನದಲ್ಲಿ ನಡೆದದ್ದೇ' ಎಂದು ಅವರ ಜಿಜ್ಞಾಸೆಯ ಕುತೂಹಲಕ್ಕೆ ತೆರೆ ಎಳೆದಳು.

ಕೋಣೆಯ ಎರಡೂ ಮಬ್ಬು ಮೂಲೆಗಳಲ್ಲಿ ಶ್ರೀಪತಿ ಮತ್ತು ಯಮುನಕ್ಕ ಅಡಗಿಕೊಂಡವರಂತೆ ಒರಗಿ ಚಿಮಣಿ ಬೆಳಕು ಬಿದ್ದ ಜನಾರ್ದನ ಅವಧಾನಿಯ